ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು,
ಕುಮಟಾ.

ಸಿಸಿ ನಂ. 126/2023

| | | |
|---|---|---|
| ಹೆಸರು | – | ಮಂಜುನಾಥ |
| ತಂದೆಯ ಹೆಸರು | – | ಜಟ್ಟಿಪಟಗಾರ |
| ವಯಸ್ಸು | – | 40 ವರ್ಷ |
| ಉದ್ಯೋಗ | – | ಬಿಸಿನೆಸ್ ಕಸಬು |
| ವಾಸ್ತವ್ಯ | – | ಬಜಾರ ರೋಡ, ಹೊನ್ನಾವರ |

– ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರಡಿ ಆರೋಪಿಯ ಹೇಳಿಕೆ –

ಪ್ರಶ್ನೆ – 1 ಈ ಪ್ರಕರಣದಲ್ಲಿನ ಸಾಕ್ಷಿದಾರರ ಹೇಳಿಕೆಯನ್ನು ಓದಿ, ಹೇಳಿ, ಕೇಳಿ, ತಿಳಿದುಕೊಂಡಿದ್ದೀರಾ?

ಉತ್ತರ –

ಪ್ರಶ್ನೆ – 2 ಪಿ ಡಬ್ಲ್ಯೂ 1 – ನಾಗೇಂದ್ರ ಕೃಷ್ಣ ಪಟಗಾರ, ಇವರು ತಮ್ಮ ಸಾಕ್ಷ್ಯದಲ್ಲಿ , ತಿಮ್ಮಪ್ಪ ಹನಮು ಪಟಗಾರ, ನೀವು ಹಾಗೂ ಶ್ರೀದೇವಿ ಗಣಪತಿ ಪಟಗಾರ , ಮಂಜುನಾಥ ಹನುಮಂತ ನಾಯ್ಕ ಸೇರಿಕೊಂಡು ಅವರ ಸಂಘಕ್ಕೆ ಭೇಟಿ ನೀಡಿ ಅವರ ಪೈಕಿ ತಿಮ್ಮಪ್ಪ ಹನಮು ಪಟಗಾರ ಇವರು ರೂ. 20,00,000/– ಗಳನ್ನು ಸಾಲವಾಗಿ ನೀಡುವಂತೆ ಸಾಲದ ಅರ್ಜಿ ಸಲ್ಲಿಸಿರುತ್ತಾರೆ ಎಂದು ಹೇಳುತ್ತಾರೆ. ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

ಪ್ರಶ್ನೆ – 3 ಪಿ ಡಬ್ಲ್ಯೂ 1 – ಇವರು ಮುಂದುವರಿದು , ಸದರಿ ಅರ್ಜಿಯನ್ನು ಅವರ ಸಂಘದವರು ಪರಿಶೀಲಿಸಿ ಸದ್ರಿಯವರಿಗೆ ಸಾಲದ ಖಾತೆ ನಂ. 624 ನೇದರಂತೆ ದಿಃ 27–05–2020 ರಂದು ರೂ. 19,00,000/–ಗಳನ್ನು ಸಾಲವಾಗಿ ನೀಡಿದ್ದು ಇರುತ್ತಿದ್ದು ಅದರಂತೆ ಸದ್ರಿಯವರು ಸಾಲವಾಗಿ ಪಡೆದಿದ್ದು ಸದ್ರಿ ಸಾಲಕ್ಕೆ ನೀವು ಹಾಗೂ ಶ್ರೀದೇವಿ ಗಣಪತಿ ಪಟಗಾರ, ಮಂಜುನಾಥ ಹನುಮಂತ ನಾಯ್ಕ ಇವರು ಜಾಮೀನುದಾರರಾಗಿದ್ದು ಇರುತ್ತದೆ ಎಂದು ಹೇಳುತ್ತಾರೆ. ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

ಪ್ರಶ್ನೆ – 4 ಪಿ ಡಬ್ಲ್ಯೂ 1 – ಇವರು ಮುಂದುವರಿದು , ಸದರಿ ಸಾಲಗಾರರು ವ ಜಾಮೀನುದಾರರು ಸಧ್ರಿ ಸಾಲದ ಕುರಿತು ಸಾಲದ ಕರಾರು ಪತ್ರ , ವಚನಪತ್ರ, ವಗೈರೇ ದಾಖಲೆಗಳನ್ನು ಬರೆಸಿಕೊಟ್ಟು ಸಾಲ ಪಡೆದಿದ್ದು ಇರುತ್ತದೆ ಎಂದು ಹೇಳುತ್ತಾರೆ . ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

ಪ್ರಶ್ನೆ – 5 ಪಿ ಡಬ್ಲ್ಯೂ 1 – ಇವರು ಮುಂದುವರಿದು , ಸದರ ಸಾಲದ ರಖಂನ್ನು ಸಾಲಗಾರರು ಹಾಗೂ ಜಾಮೀನುದಾರರು ಮಾತಿನಂತೆ ವ ದಾಖಲೆಗಳಂತೆ ಸಕಾಲದಲ್ಲಿ ವಸೂಲ ಕೊಡದೇ ಇದ್ದರಿಂದ ಸದರ ಸಾಲವು ಕಟ್ ಬಾಕಿಯಾದ್ದರಿಂದ ಅವರು ಸಾಲಗಾರರನ್ನು ಹಾಗೂ ಜಾಮೀನುದಾರರನ್ನು ಭೇಟಿಯಾಗಿ ಸದರ ಸಾಲದ ಕುರಿತು ವಸೂಲ ಬರತಕ್ಕ ಬಾಕೀ ಇದ್ದಂತಹ ಸಾಲದ ರಖಂನ್ನು ಬಡ್ಡಿ ಸಹಿತ ಪೂರ್ತಿಯಾಗಿ ವಸೂಲ ಕೊಡುವರೇ ವಿನಂತಿಸಿಕೊಂಡಾಗ ನೀವು ದಿಃ 06-05-2022 ರಂದು ಅವರ ಸಂಘಕ್ಕೆ ಬಂದು ಈ ಮೇಲೆ ಹೇಳಿದ ಸಾಲದ ರಖಂ ಪೈಕಿ ರಖಂ ರೂ . 22,67,000/- ನ್ನು ತಾನು ಮರುಪಾವತಿ ಮಾಡುತ್ತೇನೆ ಆದರೆ ಸದರ ಸಾಲದ ರಖಂ ಪೈಕಿ ರಖಂನ್ನು ಮರುಪಾವತಿ ಮಾಡುವರೇ ಈಗ ತನ್ನ ಹತ್ತಿರ ಕೈಯಲ್ಲಿ ನಗದಾಗಿ ಹವವಿಲ್ಲ ಆದ್ದರಿಂದ ನಿಮಗೆ ಚೆಕ್ ನ್ನು ಕೊಡುತ್ತೇನೆ ನೀವು ಬ್ಯಾಂಕಿನಿಂದ ಹಣ ಪಡೆದುಕೊಳ್ಳಿರಿ ಅಂತಾ ಹೇಳಿ ನೀವು ನಿಮ್ಮ ಖಾತೆ ಇರುವ ಎಕ್ಸಿಸ್ ಬ್ಯಾಂಕ ಶಾಖಾ ಕುಮಟಾ ಇದರ ಚೆಕ್ ನಂ . 005022 ರೂ. 22,67,000/- ದಿಃ 06-05-2022 ನೇದನ್ನು ನೀಡಿದ್ದು ಇರುತ್ತದೆ ಎಂದು ಹೇಳುತ್ತಾರೆ. ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

ಪ್ರಶ್ನೆ – 6 ಪಿ ಡಬ್ಲ್ಯೂ 1 – ಇವರು ಮುಂದುವರಿದು , ಸದರ ಚೆಕ್ ನ್ನು ಅವರ ಸಂಘದವರು ಅವರ ಮಾತಿನ ಮೇರೆಗೆ ಕಲೆಕ್ಷನ್ ಕುರಿತು ಅವರ ಬ್ಯಾಂಕರರಿಗೆ ಹಾಜರು ಪಡಿಸಿದಾಗ ಸದರ ಚೆಕ್ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಜಮಾ ಇಲ್ಲ ಎಂಬ ಕಾರಣದಿಂದ ನಗದೀಕರಣವಾಗದೇ

ಮರಳಿ ಬಂದಿದ್ದು ಸದರ ವಿಷಯವನ್ನು ಬ್ಯಾಂಕರರು ದಿಃ 09-05-2022 ರಂದು ತಿಳಿಸಿರುತ್ತಾರೆ ಎಂದು ಹೇಳುತ್ತಾರೆ. ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ –</u>

<u>ಪ್ರಶ್ನೆ – 7</u> ಪಿಡಬ್ಲ್ಯೂ 1 – ಇವರು ಮುಂದುವರಿದು, ಕಾರಣ ಖಾತೆಯಲ್ಲಿ ಸಾಕಷ್ಟು ಹಣ ಜಮಾ ಇಲ್ಲದೇ ಚೆಕ್ ನೀಡುವುದು ಎನ್ ಆಯ್ ಎಕ್ಟರನ್ವಯ ಅಪರಾಧವಾಗಿರುತ್ತದೆಎಂದು ಹೇಳುತ್ತಾರೆ. ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ –</u>

<u>ಪ್ರಶ್ನೆ – 8</u> ಪಿಡಬ್ಲ್ಯೂ 1 – ಇವರು ಮುಂದುವರಿದು, ಸದರ ಸಾಲದ ರಖಂನ್ನು ವಸೂಲ ಕೊಡಲು ನೀವು ಸಹ ಜವಾಬುದಾರರಿರುತ್ತಾರೆ ಎಂದು ಹೇಳುತ್ತಾರೆ . ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ –</u>

<u>ಪ್ರಶ್ನೆ – 9</u> ಪಿಡಬ್ಲ್ಯೂ 1 – ಇವರು ಮುಂದುವರಿದು, ಕಾರಣ ನೀವು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಜಮಾ ಇಲ್ಲ ಎನ್ನುವುದು ತಿಳಿದಾಗ್ಯೂ ಸಹ ಬುಧ್ಯಾ ಪೂರ್ವಕವಾಗಿ ನೀವು ಜ್ಯಾಮೀನುದಾರನಾತೆಯಿಂದ ಅವರ ಸಂಘಕ್ಕೆ ಕೊಡತಕ್ಕ ರಖಂನ್ನು ಕೊಡದೇ ತಪ್ಪಿಸಿಕೊಳ್ಳಬೇಕೆಂಬ ದುರುದ್ದೇಶದಿಂದ ಅವರ ಸಂಘಕ್ಕೆ ಬೋಗಸ್ ಚೆಕ್ ನೀಡಿ ದಂಢನೀಯ ಅಪರಾಧ ಎಸಗಿದ್ದು ಇರುತ್ತದೆ ಎಂದು ಹೇಳುತ್ತಾರೆ. ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ –</u>

<u>ಪ್ರಶ್ನೆ – 10</u> ಪಿ ಡಬ್ಲ್ಯೂ 1 – ಇವರು ಮುಂದುವರಿದು , ಕಾರಣ ಈ ಕುರಿತು ಅವರ ಬ್ಯಾಂಕಿನವರು ಅವರ ವಕೀಲರ ಮುಖಾಂತರ ದಿಃ 26-05-2022 ನೇ ನೋಂದಾಯಿತ ಅಂಚೆ

ನೋಟಿಸನ್ನು ಕಳಿಸಿ ಸದರ ನೋಟಿಸು ಮುಟ್ಟಿದ 15 ದಿವಸದೊಳಗಾಗಿ ಸದರ ಚೆಕ್ ರಖಂನ್ನು ವಸೂಲ ಕೊಡುವಂತೆ ಮಾಗಣೆ ಮಾಡಿ ಕಳಿಸಿದ ನೋಟಿಸು ನಿಮಗೆ ದಿಃ 27-05-2022 ರಂದು ಜ್ಯಾರಿಯಾಗಿರುತ್ತದೆ ಎಂದು ಹೇಳುತ್ತಾರೆ . ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

ಪ್ರಶ್ನೆ – 11 ಪಿ ಡಬ್ಲ್ಯೂ 1 – ಇವರು ಮುಂದುವರಿದು , ಆದರೆ ಸದರ ನೋಟಿಸಿಗೆ ನೀವು ಉತ್ತರವನ್ನು ನೀಡಿದ್ದು ಇಲ್ಲ ಮತ್ತು ಸದರ ಚೆಕ್ ರಖಂ ಈವರೆಗೂ ವಸೂಲ ಕೊಟ್ಟಿರುವುದಿಲ್ಲ ಎಂದು ಹೇಳುತ್ತಾರೆ . ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

ಪ್ರಶ್ನೆ – 12 ಈ ಪ್ರಕರಣದ ಬಗ್ಗೆ ನೀವು ಏನಾದರೂ ಹೇಳಲು ಇಚ್ಛಿಸುತ್ತೀರಾ?

ಉತ್ತರ –

ಪ್ರಶ್ನೆ – 13 ನಿಮ್ಮ ಪರ ರಕ್ಷಣಾ ಸಾಕ್ಷಿಯನ್ನು ವಿಚಾರಣೆ ಮಾಡುತ್ತೀರಾ?

ಉತ್ತರ –

ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು. ಇದರಲ್ಲಿನ ಎಲ್ಲ ಅಂಶಗಳನ್ನು ಈ ಕಡತವು ಪೂರ್ಣವಾಗಿ ಒಳಗೊಂಡಿರುತ್ತದೆ.

ಸ್ಥಳಃ ಕುಮಟಾ
ದಿಃ 21-02-2025.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾ.ದಂ., ಕುಮಟಾ